# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸರ್ವಜ್ಞನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ.30 ಕಾಡುಗೊಂಡನಹಳ್ಳಿಗೆ ಸಂಬಂಧಿಸಿದಂತೆ ದಿನಾಂಕ: 07.11.2020 ರಂದು ಶ್ರೀ.ತಿಪ್ಪೇಸ್ವಾಮಿ, ನೋಡಲ್ ಅಧಿಕಾರಿಗಳು ಇವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಮತ್ತು ವಿಪತ್ತು ನಿರ್ವಹಣಾ ಸಮಿತಿ ಸಭೆಯ ನಡಾವಳಿಗಳು.**

**ಸಭೆಯಲ್ಲಿ ಹಾಜರಿದ್ದವರ ವಿವರ:-**

1) ಶ್ರೀ.ತಿಪ್ಪೇಸ್ವಾಮಿ, ನೋಡಲ್ ಅಧಿಕಾರಿ & ವಾರ್ಡ್ ಸಮಿತಿ ಅಧ್ಯಕ್ಷರು, ವಾ-30 ಕೆ.ಜಿ.ಹಳ್ಳಿ
2) ಶ್ರೀ.ಬಿ.ಎನ್.ರಾಮಕೃಷ್ಣಯ್ಯ, ಸಹಾಯಕ ಅಭಿಯಂತರರು, & ಕಾರ್ಯದರ್ಶಿಗಳು ವಾರ್ಡ್ ಸಂಖ್ಯೆ.30. ಕೆ.ಜಿ.ಹಳ್ಳಿ.
3) ಶ್ರೀಮತಿ. ಡಾ॥ ಶೋಭಾ,ಎಂ, ಪ್ರಾಥಮಿಕ ಆರೋಗ್ಯ ಕೇಂದ್ರ ಕೆ.ಜಿ.ಹಳ್ಳಿ,
4) ಶ್ರೀ.ಜಿ.ಆದಿನಾರಾಯಣ, ಸಹಾಯಕ ಅಭಿಯಂತರರು, ಬೆಸ್ಕಾಂ ಉಪ-ವಿಭಾಗ, ಪಿಳ್ಳಣ್ಣಗಾರ್ಡನ್ ಕೆ.ಜಿ.ಹಳ್ಳಿ, ಬೆಂಗಳೂರು.
5) ಶ್ರೀ.ಆನಂದ.ಎ, ಕಿರಿಯ ಅಭಿಯಂತರರು, ಬೆಸ್ಕಾಂ.
6) ಶ್ರೀ.ಮಹೇಶ್, ಜಲ ಪರಿವೀಕ್ಷಕರು (ಪಿ.ಜಿ), ಸ.ಕಾ.ನಿ.ಅ (ಕೇಂದ್ರ)-3, ಬೆಂ.ಜ.ಮಂಡಳಿ
7) ಶ್ರೀ.ಪಿ.ಚಂದ್ರಶೇಖರ್, HRPG
8) ಶ್ರೀ.ಸತ್ಯನಾರಾಯಣ, HRPG
9) ಶ್ರೀ. ಶ್ರೀ.ಆರ್.ರಾಜೇಂದ್ರನ್, ಮಾಜಿ ವಾರ್ಡ್ ಸಮಿತಿ ಸದಸ್ಯರು.
10) ಶ್ರೀ.ದೇವಕುಮಾರ್, ಮಾಜಿ ವಾರ್ಡ್ ಸಮಿತಿ ಸದಸ್ಯರು.
11) ಶ್ರೀ.ಶಶಿಕುಮಾರ್, ಮಾಜಿ ವಾರ್ಡ್ ಸಮಿತಿ ಸದಸ್ಯರು.
12) ಶ್ರೀ.ಜೈ ದೇವ ಪ್ರಕಾಶ್, ಮಾಜಿ ವಾರ್ಡ್ ಸಮಿತಿ ಸದಸ್ಯರು.
13) ಶ್ರೀ.ಯರನ್ ಕುಮಾರ್, ಸಾರ್ವಜನಿಕರು,
14) ಶ್ರೀ.ಇರ್ಫಾನ್, ಸಾರ್ವಜನಿಕರು,

ವಾರ್ಡ್ ಸಮಿತಿಯ ಕಾರ್ಯದರ್ಶಿ ಮತ್ತು ನೋಡಲ್ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದ ಅದ್ಯಕ್ಷರು, ಸದಸ್ಯರುಗಳನ್ನು ಸ್ವಾಗತಿಸುವುದರೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

ಈ ಹಿಂದಿನ ಸಭೆಯಲ್ಲಿ ಚರ್ಚಿತವಾದ ವಿಷಯಗಳ ಬಗ್ಗೆ ಪುನರ್ ಅವಲೋಕಿಸಲಾಯಿತು.

➢ **ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ:-** ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿಯ ಉಸ್ತುವಾರಿಯಾದ ಜೂನಿಯರ್ ಹೆಲ್ತ್ ಇನ್ಸ್‌ಪೆಕ್ಟರ್ ಕುಮಾರಿ.ಮೋನಿಕಾ ರವರಿಗೆ ಕೋವಿಡ್ ಇರುವುದರಿಂದ ಸಭೆಗೆ ಗೈರು ಹಾಜರಾಗಿದ್ದರು. ಸದರಿಯವರ ಗೈರು ಹಾಜರಿಯಲ್ಲಿ ಘನತ್ಯಾಜ್ಯ ಗುತ್ತಿಗೆದಾರರಾದ ಶ್ರೀ.ಎಬು ಮತ್ತು ಮೇಲ್ವಿಚಾರಕರಾದ ಶ್ರೀ.ರಾಜ ಇವರುಗಳು ಸಭೆಗೆ ಹಾಜರಾಗಿ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ ಸಭೆಗೆ ಮಾಹಿತಿ ಒದಗಿಸಿದರು.

ಸಭೆಯಲ್ಲಿ ಹಾಜರಿದ್ದ ಶ್ರೀ.ರಾಜೇಂದ್ರನ್‌ರವರು ಬಿ.ಎಂ.ಲೇಔಟ್, ಪಾರಿಜಾತ ಶಾಲೆ ಪ್ರದೇಶದಲ್ಲಿ ಮನೆ ಮನೆಯಿಂದ ನಿಯಮಿತವಾಗಿ ಕಸ ಸಂಗ್ರಹಿಸಲು ಆಟೋಗಳು ಬರುತ್ತಿಲ್ಲ. ಎಂಬುದಾಗಿ ಸಭೆಗೆ ತಿಳಿಸಿದರು.

ನೋಡಲ್ ಅಧಿಕಾರಿಯವರು ಘನತ್ಯಾಜ್ಯ ಸಂಗ್ರಹಣೆಗೆ ವಾರ್ಡ್ ವ್ಯಾಪ್ತಿಯಲ್ಲಿ ಇರುವ ಒಟ್ಟು ಆಟೋಗಳು, ಕಾಂಪ್ಯಾಕ್ಟರ್‌ಗಳು, ಪೌರ ಕಾರ್ಮಿಕರ ವಿವರವನ್ನು ಸಲ್ಲಿಸಲು ತಿಳಿಸಿದಲ್ಲದೆ ಮನೆ ಮನೆಯಿಂದ ನಿಯಮಿತವಾಗಿ ಕಸ ಸಂಗ್ರಹಿಸಲು ಸೂಚಿಸಿದರು. ಎಲ್ಲಾ ಬ್ಲಾಕ್ ಸ್ಪಾಟ್‌ಗಳನ್ನು ತೆರವುಗೊಳಿಸಲು ಸಹ ಸೂಕ್ತ ಕ್ರಮ ವಹಿಸಲು ಸೂಚಿಸಿದರು.

ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ವಾರ್ಡ್ ವ್ಯಾಪ್ತಿಯಲ್ಲಿ ನಿಗಧಿಗಿಂತ ಹೆಚ್ಚು ಕಸ ಸಂಗ್ರಹವಾಗುತ್ತಿದ್ದು, ಹೆಚ್ಚುವರಿಯಾಗಿ ಒಂದು ಕಾಂಪ್ಯಾಕ್ಟರ್ ಒದಗಿಸಲು ಸಂಬಂಧಿಸಿದವರಿಗೆ ಮನವಿ ಸಲ್ಲಿಸಲು ಸಭೆಯಲ್ಲಿ ಕೋರಿದರು.

ನೋಡಲ್ ಅಧಿಕಾರಿಯವರು ಈ ಬಗ್ಗೆ ಖುದ್ದಾಗಿ ಸ್ಥಳ ಪರಿಶೀಲಿಸಿ ಅಗತ್ಯವಿದ್ದಲ್ಲಿ ಈ ಬಗ್ಗೆ ಕ್ರಮ ವಹಿಸಲು ಕೋರಲಾಗುವುದು. ಎಂದು ತಿಳಿಸಿದರು.

**(ಕ್ರಮ :- ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ ಸರ್ವಜ್ಞನಗರ ವಿಭಾಗ ಬಿ.ಬಿ.ಎಂ.ಪಿ ಬೆಂಗಳೂರು)**

- **ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಪರಿಸ್ಥಿತಿ ಬಗ್ಗೆ:-** ಕೆ.ಜಿ.ಹಳ್ಳಿ ಆರೋಗ್ಯ ಕೇಂದ್ರ ವತಿಯಿಂದ ಸಭೆಗೆ ಹಾಜರಾಗಿದ್ದ ಡಾ॥ ಶೋಭಾ.ಎನ್. ರವರು ವಾರ್ಡ್ ಉಸ್ತುವಾರಿಗೆ ಒಬ್ಬ ANM, 3 ಜನ ಆಶಾ ಕಾರ್ಯಕರ್ತೆಯರು, ಒಬ್ಬ ವೈದ್ಯರು ಇರುವುದಾಗಿ ತಿಳಿಸಿದರು. ವಾರ್ಡ್ ವ್ಯಾಪ್ತಿಯಲ್ಲಿ 16 Active ಪ್ರಕರಣಗಳಿದ್ದು, ಇಲ್ಲಿಯವರೆಗೆ ಒಟ್ಟು 15 ಜನರು ಕೋವಿಡ್‌ನಿಂದಾಗಿ ಮೃತರಾಗಿರುವುದಾಗಿ ತಿಳಿಸಿದರು. ವಾರ್ಡ್ ವ್ಯಾಪ್ತಿಯಲ್ಲಿ ಪ್ರತಿ ದಿನ 125 ಕರೋನಾ ಟೆಸ್ಟ್ ಮಾಡಲು ಗುರಿ ನಿಗಧಿಪಡಿಸಿದ್ದು, ನಿಗಧಿತ ಗುರಿಯಂತೆ ಟೆಸ್ಟ್ ಮಾಡಲು ಸಾರ್ವಜನಿಕರು ಹಾಗೂ ಸ್ಥಳೀಯ ಮುಖಂಡರು ಸಹಕರಿಸಬೇಕೆಂದು ಕೋರಿದರು.

  **(ಕ್ರಮ :-ಆರೋಗ್ಯ ವೈದ್ಯಾಧಿಕಾರಿಗಳು , ಪ್ರಾಥಮಿಕ ಆರೋಗ್ಯ ಕೇಂದ್ರ ಕೆ.ಜಿ.ಹಳ್ಳಿ)**

- **ಬೀದಿ ದೀಪಗಳ ನಿರ್ವಹಣೆ ಬಗ್ಗೆ:-** ವಾರ್ಡ್ ವ್ಯಾಪ್ತಿಯಲ್ಲಿ ಸಾಕಷ್ಟು ಕಡೆ ಬೀದಿ ದೀಪಗಳು ದುರಸ್ಥಿಯಲ್ಲಿದ್ದು, ಈ ಬಗ್ಗೆ ದೂರು ನೀಡಲು, ಬಯಸುವ ಸಾರ್ವಜನಿಕರಿಗೆ ಉಸ್ತುವಾರಿ ಇಂಜಿನಿಯರ್ ಶ್ರೀ.ಆನಂದ್ ರವರು ಸ್ಪಂದಿಸುತ್ತಿಲ್ಲ ಹಾಗೂ ಮೊಬೈಲ್ ಕರೆ ಸ್ವೀಕರಿಸುತ್ತಿಲ್ಲ ಎಂಬುದಾಗಿ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ತಿಳಿಸಿದರು.

  ಈ ಬಗ್ಗೆ ನೋಡಲ್ ಅಧಿಕಾರಿಯವರು ಶ್ರೀ.ಶಂಕರ್, ಕಾರ್ಯಪಾಲಕ ಅಭಿಯಂತರರು ವಿದ್ಯುತ್ (ಪೂರ್ವ) ರವರನ್ನು ಮೊಬೈಲ್ ಮೂಲಕ ಸಂಪರ್ಕಿಸಲು ಪ್ರಯತ್ನಿಸಲಾಗಿ ಸದರಿಯವರೂ ಸಹ ಕರೆ ಸ್ವೀಕರಿಸಿರುವುದಿಲ್ಲ.

  ಆದುದರಿಂದ ಇನ್ನು ಮುಂದೆ ವಾರ್ಡ್ ಕಮಿಟಿ ಸಭೆಗೆ ಬೀದಿ ದೀಪ ನಿರ್ವಹಣೆಯ ಉಸ್ತುವಾರಿ ಇಂಜಿನಿಯರ್‌ರವರನ್ನು ಕರೆಸಲು ಸಾರ್ವಜನಿಕರು ಕೋರಿದರು.

  ಅದರಂತೆ ಕಾರ್ಯಪಾಲಕ ಅಭಿಯಂತರರು ವಿದ್ಯುತ್ (ಪೂರ್ವ) ರವರಿಗೆ ಸಂಬಂಧಿಸಿದ ಇಂಜಿನಿಯರ್‌ರವರನ್ನು ವಾರ್ಡ್ ಸಮಿತಿ ಸಭೆಗೆ ಹಾಜರಾಗಲು ಸೂಚನೆ ನೀಡುವಂತೆ ನೋಡಲ್ ಅಧಿಕಾರಿಯವರು ತಿಳಿಸಿದರು.

  **(ಕ್ರಮ:- ಕಾರ್ಯಪಾಲಕ ಅಭಿಯಂತರರು ವಿದ್ಯುತ್ ವಿಭಾಗ ಪೂರ್ವ ಬೆಂಗಳೂರು)**

- **ನೀರು ಸರಭರಾಜು ಮತ್ತು ಒಳಚರಂಡಿ ವ್ಯವಸ್ಥೆ ಬಗ್ಗೆ (ಬಿ.ಡಬ್ಲ್ಯೂ.ಎಸ್.ಎಸ್.ಬಿ):-** ಟೆಲಿಗ್ರಾಫಿಕ್ ಸ್ಟ್ರೀಟ್‌ನ ಜೇಮ್ಸ್ ಸ್ಕೂಲ್ ಪ್ರದೇಶದಲ್ಲಿ ವಾರಕ್ಕೆ ಒಂದು ಬಾರಿ ರಾತ್ರಿ 12.00 ಗಂಟೆಯ ನಂತರ ನೀರು ಬಿಡುತ್ತಿದ್ದು, ಸಾರ್ವಜನಿಕರು ತಡ ರಾತ್ರಿ ಎಚ್ಚರದಿಂದಿದ್ದು, ನೀರು ಸಂಗ್ರಹಿಸಲು ತೊಂದರೆಯಾಗುತ್ತಿರುವುದಾಗಿಯೂ, ಆದ ಪ್ರಯುಕ್ತ ನೀರನ್ನು ಹಗಲು ವೇಳೆಯಲ್ಲಿ ಬಿಡಬೇಕೆಂದು ಹಾಗೂ ನೀರಿನ ಪ್ರಮಾಣವನ್ನು ಹೆಚ್ಚು ಮಾಡಬೇಕೆಂದು ಸಾರ್ವಜನಿಕರು ಸಭೆಯಲ್ಲಿ ಕೋರಿದರು.

  ಇದಲ್ಲದೆ ಶ್ರೀ.ಶಶಿಕುಮಾರ್ ರವರು ಒಳಚರಂಡಿ ಕೊಳಾಯಿಗಳಲ್ಲಿ ಉಂಟಾಗುವ ಬ್ಲಾಕ್‌ಗಳನ್ನು ತೆರವುಗೊಳಿಸಲು ಇರುವ ವಾಹನ ವ್ಯವಸ್ಥೆಯನ್ನು ನಿಯಮಿತವಾಗಿ ನಿರ್ವಹಿಸಲು ಕೋರಿದರು.

  ಈ ಬಗ್ಗೆ ನೋಡಲ್ ಅಧಿಕಾರಿಗಳು ಬಿ.ಡಬ್ಲ್ಯೂ.ಎಸ್.ಎಸ್.ಬಿ ಯವರು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು. ಸಭೆಯಲ್ಲಿ ಹಾಜರಿದ್ದ ಶ್ರೀ.ಮಹೇಶ್ ಕೆಲಸ ಪರಿವೀಕ್ಷಕರು ರವರು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

  **(ಕ್ರಮ :- ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ಉಪ-ವಿಭಾಗ, ಫ್ರೆಜರ್ ಟೌನ್)**

- **ಕಾನೂನು ಮತ್ತು ಸುವ್ಯವಸ್ಥೆ ಬಗ್ಗೆ:-** ಪಿಳ್ಳಣ್ಣಗಾರ್ಡನ್‌ನಲ್ಲಿರುವ ವಿನೋಭನಗರ ಎ.ಕೆ.ಕಲೋನಿ, ಟೆಲಿಗ್ರಾಫಿಕ್ ಸ್ಟ್ರೀಟ್, ಜೇಮ್ಸ್ ಸ್ಕೂಲ್ ಏರಿಯಾ, ಬಿ.ಎಂ.ಲೇಔಟ್‌ನ ಪಾರಿಜಾತ ಶಾಲೆ ರಸ್ತೆ, ಸೋಮೇಶ್ವರ ಲೇನ್, ವಿನಾಯಕ ಸ್ಟ್ರೀಟ್ ಹಾಗೂ ರೈಲ್ವೆ ಸ್ವತ್ತಿನಲ್ಲಿ ಕಿಡಿಗೇಡಿಗಳು ಗುಂಪುಗೂಡಿಕೊಂಡು ಗಾಂಜಾ ಸೇದುವುದು, Eve teasing ಮಾಡುವುದು, ಕಳ್ಳತನ ಮಾಡುವುದು, ಹಲ್ಲೆ ಮಾಡುವುದು ಇತ್ಯಾದಿ ಅನೈತಿಕ ಹಾಗೂ ಅಕ್ರಮ ಚಟುವಟಿಕೆಗಳನ್ನು ಮಾಡುತ್ತಿದ್ದು, ಈ ಭಾಗದಲ್ಲಿ ಪೋಲೀಸ್ ಗಸ್ತು ಹೆಚ್ಚಿಸಿ ಕಿಡಿಗೇಡಿಗಳ ವಿರುದ್ಧ ಕಠಿಣ ಕ್ರಮ ಕೈಗೊಂಡು ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಕೋರಿದರು.

  ಈ ಬಗ್ಗೆ ನೋಡಲ್ ಅಧಿಕಾರಿಗಳು ಆರಕ್ಷಕ ವೃತ್ತ ನಿರೀಕ್ಷಕರು ಕೆ.ಜಿ.ಹಳ್ಳಿ ಪೋಲೀಸ್ ಠಾಣೆ ರವರು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

  **(ಕ್ರಮ:- ಆರಕ್ಷಕ ವೃತ್ತ ನಿರೀಕ್ಷಕರು ಕೆ.ಜಿ.ಹಳ್ಳಿ ಪೋಲೀಸ್ ಠಾಣೆ)**

- ವಾರ್ಡ್‌ನಲ್ಲಿ ಪಿಳ್ಳಣ್ಣಗಾರ್ಡನ್ 1ನೇ ಅಡ್ಡರಸ್ತೆ, 7ನೇ ಅಡ್ಡರಸ್ತೆ, 8ನೇ ಮುಖ್ಯರಸ್ತೆಗಳಲ್ಲಿ ವ್ಯಾಪಾರಸ್ಥರು ಹಳೆಯ ವಾಹನಗಳನ್ನು ಎಲ್ಲೆಂದರಲ್ಲಿ ನಿಲ್ಲಿಸಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುತ್ತಿದ್ದು, ಸಾರ್ವಜನಿಕರ ಓಡಾಟಕ್ಕೆ ತೊಂದರೆ ಉಂಟುಮಾಡುತ್ತಿರುವುದಾಗಿ ಸಭೆಯಲ್ಲಿ ಪ್ರಸ್ತಾಪಿಸಿ ಸೂಕ್ತ ಕ್ರಮ ಕೈಗೊಳ್ಳಲು ಕೋರಿದರು.

  ಈ ಬಗ್ಗೆ ನೋಡಲ್ ಅಧಿಕಾರಿಗಳು ಆರಕ್ಷಕ ವೃತ್ತ ನಿರೀಕ್ಷಕರು, ಸಂಚಾರಿ ಪೋಲೀಸ್ ಠಾಣೆ, ಕೆ.ಜಿ.ಹಳ್ಳಿ ರವರು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

  **(ಕ್ರಮ: ಆರಕ್ಷಕ ವೃತ್ತ ನಿರೀಕ್ಷಕರು ಸಂಚಾರಿ ಪೋಲೀಸ್ ಠಾಣೆ ಕೆ.ಜಿ.ಹಳ್ಳಿ.)**

- **ಒಂಟಿ ಮನೆ ನಿರ್ಮಿಸುವ ಬಗ್ಗೆ:-** ಬಿ.ಬಿ.ಎಂ.ಪಿ ವತಿಯಿಂದ 2020-21ನೇ ಸಾಲಿನ **ಲೆಕ್ಕ ಶೀರ್ಷಿಕೆ ಪಿ-2021** ರ ಆಯವ್ಯಯದಲ್ಲಿ ನಿಗಧಿಪಡಿಸಿರುವ ಅನುದಾನದ ಅನ್ವಯ **5 ಜನ ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ** ಫಲಾನುಭವಿಗಳಿಗೆ ವೈಯಕ್ತಿಕ ಒಂಟಿ ಮನೆ ನಿರ್ಮಿಸಲು ಅನುದಾನ ವಿತರಿಸಲು ತೀರ್ಮಾನಿಸಲಾಯಿತು.

➢ ಬಿ.ಬಿ.ಎಂ.ಪಿ ವತಿಯಿಂದ 2020-21ನೇ ಸಾಲಿನ **ಲೆಕ್ಕ ಶೀರ್ಷಿಕೆ ಪಿ-2340** ರ ಆಯವ್ಯಯದಲ್ಲಿ ನಿಗಧಿಪಡಿಸಿರುವ ಅನುದಾನದ ಅನ್ವಯ **5 ಜನ ಹಿಂದುಳಿದ ವರ್ಗದ** ಫಲಾನುಭವಿಗಳಿಗೆ ವೈಯಕ್ತಿಕ ಒಂಟಿ ಮನೆ ನಿರ್ಮಿಸಲು ಅನುದಾನ ವಿತರಿಸಲು ತೀರ್ಮಾನಿಸಲಾಯಿತು.

**(ಕ್ರಮ:- ಕಾಮಗಾರಿ ಇಲಾಖೆ, ಬಿ.ಬಿ.ಎಂ.ಪಿ)**

ಸಭೆಯಲ್ಲಿ ಹಾಜರಿದ್ದ ಎಲ್ಲರನ್ನು ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ವಂದನೆಗಳೊಂದಿಗೆ,**

ಕಾರ್ಯದರ್ಶಿಗಳು
ವಾರ್ಡ್ ಸಂಖ್ಯೆ.30.ಕೆ.ಜಿ.ಹಳ್ಳಿ

ನೋಡಲ್ ಅಧಿಕಾರಿ & ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್ ಸಂಖ್ಯೆ.30.ಕೆ.ಜಿ.ಹಳ್ಳಿ

**ಪ್ರತಿಯನ್ನು:**

1. ಜಂಟಿ ಆಯುಕ್ತರು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮುಖ್ಯ ಅಭಿಯಂತರರು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಕಾರ್ಯಪಾಲಕ ಅಭಿಯಂತರರು ವಿದ್ಯುತ್ (ಪೂರ್ವ) ವಿಭಾಗ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ ಸರ್ವಜ್ಞನಗರ ಉಪ-ವಿಭಾಗ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
6. ಆರೋಗ್ಯ ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ಕೆ.ಜಿ.ಹಳ್ಳಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ಉಪ-ವಿಭಾಗ, ಫ್ರೆಜರ್‌ಟೌನ್ ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
8. ಆರಕ್ಷಕ ವೃತ್ತ ನಿರೀಕ್ಷಕರು ಕೆ.ಜಿ.ಹಳ್ಳಿ ಪೋಲೀಸ್ ಠಾಣೆ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
9. ಆರಕ್ಷಕ ವೃತ್ತ ನಿರೀಕ್ಷಕರು, ಸಂಚಾರಿ ಪೋಲೀಸ್ ಠಾಣೆ, ಕೆ.ಜಿ.ಹಳ್ಳಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
10. ಕಛೇರಿ ಕಡತಕ್ಕೆ.

JOINT COMMISSIONER (EAST)

ಮುಖ್ಯ ಅಭಿಯಂತರರು (ಪೂರ್ವ)
ಸಂಖ್ಯೆ:
ದಿನಾಂಕ: 13/11/2020

ಕಾರ್ಯಪಾಲಕ ಅಭಿಯಂತರರ ಕಾರ್ಯಾಲಯ
ನಂ. ............
ತಾ. 13/11/2020
ಬೆಂಗಳೂರು-1

O/c

13/11/2020

Office of the Asst. Executive Engineer
B.W.S.S.B.
Netaji Rd, Frazer Town,
Bangalore-560 005.
No. 08
Dt. 13-11-2020
No. 3, Central W.S. & Sanitary Sub Division

ದಿನಾಂಕ 13/11/2020
ಬೆಂಗಳೂರು ನಗರ-560 045

KADUGONDANAHALLI POLICE STATION
No. ............
Dt. 13/11/2020
BANGALORE-45

Medical Officer
K. G. Halli Health Centre
IPP VIII, Bangalore - 45